ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಯಾಂತ್ರಿಕ ದೋಣಿಗಳ ಸಂಖ್ಯೆ

೩೫೦ (೧೪೪) ಶ್ರೀ ಆರ್.ಎನ್. ನಾಯ್ಕ್ (ಭಟ್ಕಳ್).—ಮುಖ್ಯ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸರಕಾರದಿಂದ ಸಹಾಯ ಧನವನ್ನು ಪಡೆದು ನಡೆಸಲಾಗು ತ್ತಿರುವ ಯಾಂತ್ರಿಕ ದೋಣಿಗಳ ಸಂಖ್ಯೆ ಎಷ್ಟು ; ಮತ್ತು ಇವುಗಳಲ್ಲಿ ಪರ್ಶಿಯನ್ ದೋಣಿಗಳ ಸಂಖ್ಯೆ ಎಷ್ಟು ;

(ಆ) ಎಷ್ಟು ದೋಣಿಗಳನ್ನು ವಿಮಾನುಗಾರಿಕೆ ಮೂಲೋದ್ಯೋಗವಲ್ಲದವರಿಗೆ ನೀಡಲಾಗಿದೆ ?

೩೫೩ (೧೪೦) ಶ್ರೀ ಹನುಮಂತರಾವ್ ದೇಸಾಯಿ (ಆಫ್‌ಜಲಪುರ).—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಆಫ್‌ಜಲ್‌ಪುರ ತಾಲ್ಲೂಕಿನ ಆಸ್ಪತ್ರೆಯಲ್ಲಿ ಸಾಕಷ್ಟು ಔಷಧಿಗಳು ದೊರಕದಿರುವುದ ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ, ಸಾಕಷ್ಟು ಔಷಧಿಗಳನ್ನು ಪೂರೈಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಅಧ್ಯಕ್ಷರು.–ಲಿಖಿತ ಮೂಲಕ ಉತ್ತರಿಸುವ ಉತ್ತರದ ಪಟ್ಟಿಯನ್ನು ಸದನದಲ್ಲಿ ಮಂಡಿಸುವುದು.

ಶ್ರೀ ಎಂ. ರಘುಪತಿ.—ಲಿಖಿತ ಮೂಲಕ ಉತ್ತರಿಸುವ ಉತ್ತರದ ಪಟ್ಟಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಬೆಂಗಳೂರಲ್ಲಿ ಸರ್ಕಸ್ ದುರಂತವಾದ ಬಗ್ಗೆ

೧೮೮ (೧೫೯) ಶ್ರೀ ಬಾಕೀಲ ಹುಕ್ರಪ್ಪ (ಸುಳ್ಯ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಹಿಂದೆ ಬೆಂಗಳೂರಿನಲ್ಲಿ ಸಂಭವಿಸಿದ ಸರ್ಕಸ್ ದುರಂತದ ಬಗ್ಗೆ ನಡೆಸಲಾದ ತನಿಖೆಯ ವರದಿಯ ಮೇರೆಗೆ ತಪ್ಪಿತಸ್ಥ ಅಧಿಕಾರಿಗಳಾರು ;

(ಆ) ಅವರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

(ಅ) ಬೆಂಗಳೂರಿನಲ್ಲಿ ತಾರೀಖು ೭–೨–೧೯೮೧ರಲ್ಲಿ ಸಂಭವಿಸಿದ ಸರ್ಕಸ್ ದುರಂತದ ತನಿಖೆಯ ಬಗ್ಗೆ ಕುದೂರ್ ಆಯೋಗದ ವರದಿ ಹಾಗೂ ಕ್ರಮ ಕೈಗೊಂಡ ಜ್ಞಾಪನಾ ಪತ್ರದ ಪ್ರತಿಗಳನ್ನು ವಿಧಾನ ಸಭೆಯ ಮುಂದೆ ತಾರೀಖು ೨೫–೧–೮೩ರಂದು ಮಂಡಿಸಲಾಗಿದೆ. ಇಲ್ಲಿ ಕೇಳಲಾದ ವಿವರಗಳು ಮೇಲ್ಕಂಡ ದಾಖಲೆಗಳಲ್ಲಿ ನಮೂದಿಸಲಾಗಿವೆ.

(ಆ) ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಅಗತ್ಯ ಕ್ರಮ ಕೈಗೊಳ್ಳಲು ಆದೇಶಗಳನ್ನು ನೀಡಲಾಗಿದೆ.

ಲೋಕ ಸೇವಾ ಆಯೋಗ ಸಂದರ್ಶನಗಳನ್ನು ಕುರಿತು

೧೮೯ (೧೫೧). ಶ್ರೀ ಹನುಮಂತರಾವ್ ದೇಸಾಯಿ (ಆಫ್‌ಜಲ್‌ಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಕರ್ನಾಟಕ ಲೋಕ ಸೇವಾ ಆಯೋಗದ ಸಂದರ್ಶನಗಳನ್ನು ಯಾವ ಯಾವ ವಿಭಾಗಗಳಲ್ಲಿ ನಡೆಸಲಾಗುತ್ತಿದೆ ?

ಅ) ಸಂದರ್ಶನಗಳನ್ನು ನಡೆಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಸಂದರ್ಶನಕ್ಕೆ ಸಾಕಷ್ಟು ಅಭ್ಯರ್ಥಿಗಳು ಇದ್ದರೆ ಮತ್ತು ಆಯೋಗದ ಸದಸ್ಯರುಗಳಿಗೂ ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯವಿದ್ದರೆ ಸಂದರ್ಶನವನ್ನು ಎಲ್ಲಾ ವಿಭಾಗಗಳ ಕೇಂದ್ರ ಕಚೇರಿ ಸ್ಥಳಗಳಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ನಡೆಸಲಾಗುತ್ತಿದೆ. ಕನ್ನಡ ಮೌಕಿಖಿ ಪರೀಕ್ಷೆ ಸಾಕಷ್ಟು ಅಭ್ಯರ್ಥಿಗಳು ಇದ್ದರೆ ಜಿಲ್ಲಾ ಕೇಂದ್ರ ಕಚೇರಿ ಸ್ಥಳಗಳಲ್ಲಿ ನಡೆಸಲಾಗುವುದು.

ಆ) ಗುಲ್ಬರ್ಗಾ ವಿಭಾಗದಲ್ಲಿ ಸಂದರ್ಶನ ನಡೆಸುತ್ತಿಲ್ಲ ಎಂಬ ವಿಷಯ ಮಾತ್ರ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸಾಕಷ್ಟು ಅಭ್ಯರ್ಥಿಗಳು ಇಲ್ಲದೆ ಇರುವುದು ಮತ್ತು ವಸತಿ ಸೌಕರ್ಯ ಇಲ್ಲದೆ ಇರುವುದು.

ಪೋಲೀಸ್ ಇಲಾಖೆಯಲ್ಲಿ ನಾಲ್ಕು ಜನ ಡೈರಕ್ಟರ್ ಜನರಲ್ ಬಗ್ಗೆ

೧೯೦ (೧೬೦) ಶ್ರೀ ಬಾಕೀಲ ಹುಕ್ರಪ್ಪ (ಸುಳ್ಯ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ) ಈ ವರ್ಷ ಪೋಲೀಸ್ ಇಲಾಖೆಯಲ್ಲಿ ನಾಲ್ಕು ಜನ ಡೈರೆಕ್ಟರ್ ಜನರಲ್ ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಇವರ ಕೆಲಸಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಆರಕ್ಷಕ ಮಹಾನಿರ್ದೇಶಕರ ಹುದ್ದೆಗಳು ರಾಜ್ಯದಲ್ಲಿ ನಾಲ್ಕು ಇವೆ.

ಎರಡು ಆರಕ್ಷಕ (ಪೋಲೀಸ್) ಇಲಾಖೆಯಲ್ಲಿ

ಒಂದು ಕರ್ನಾಟಕ ರಾಜ್ಯ ಜಾಗೃತಿ ನಿಯೋಗದಲ್ಲಿ

ಒಂದು ಗೃಹ ರಕ್ಷಕ ದಳ ಹಾಗೂ ಅಗ್ನಿ ದಳದಲ್ಲಿ

ಆ) ೧) ಆರಕ್ಷಕ ಮಹಾನಿರ್ದೇಶಕರು ಹಾಗೂ ಮಹಾನಿರೀಕ್ಷಕರು, ಬೆಂಗಳೂರು.

ಅ) ಶಾಂತಿ ಪರಿಪಾಲನೆ

ಆ) ಆಡಳಿತ ನಿರ್ವಹಣೆ

ಇ) ಅಪರಾಧ ತನಿಖೆ

ಈ) ಗುಪ್ತ ವರದಿಗಳು

ಉ) ಸಶಸ್ತ್ರ ವಿಾಸಲು ಪಡೆ

ಊ) ಆರಕ್ಷಕ ನಿವೇಶನ ಹಾಗೂ ಕಲ್ಯಾಣ

ಋ) ಬೇತಾರ (ವೈರಲೆಸ್), ಗಣಕ ಮತ್ತು ಆರಕ್ಷಕ ದಳವನ್ನು ಆಧುನೀಕರಿಸುವುದು.

೨) ಆರಕ್ಷಕ ಮಹಾ ನಿರ್ದೇಶಕರು ಹಾಗೂ ಗೃಹ ರಕ್ಷಕ ದಳದ ಪ್ರಧಾನ ಕಮಾಂಡೆಂಟ್ ಮತ್ತು ಪದನಿಮಿತ್ತ ನಿರ್ದೇಶಕರು ಸಿವಿಲ್ ರಕ್ಷಣೆ ಮತ್ತು ನಿರ್ದೇಶಕರು, ಅಗ್ನಿ ದಳ, ಬೆಂಗಳೂರು.

ಅ) ಗೃಹ ರಕ್ಷಕ ದಳ

ಆ) ಅಗ್ನಿ ದಳ

ಇ) ಸಿವಿಲ್ ರಕ್ಷಣೆ ಮತ್ತು

ಈ) ರೇಲ್ವೆ ಆರಕ್ಷಕ ದಳ